**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ</u>**

**<u>ಸಿ.ಸಿ.ನಂಃ 1822/2023</u>**

<u>ಫಿರ್ಯಾದುದಾರರು</u> ಃ ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

**: ವಿರುದ್ಧ :**

<u>ಆರೋಪಿ</u> ಃ ಶ್ರೀ ವಜೀರ್ ಸಾಬ್,
ಬಿನ್ ಶ್ರೀ ಮೊಯಿದ್ದಿನ್ ಸಾಬ್,
52 ವರ್ಷ,
ವಾಸಃ ಅಂಬೇಡ್ಕರ್ ಬಡಾವಣೆ,
ಅಜ್ಜಂಪುರ ತಾಲ್ಲೂಕು.

**<u>ಆಪಾದನೆಯ ಸಾರಾಂಶ</u>**

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ಅಪಾದನೆ ಏನೆಂದರೆಃ

ದಿನಾಂಕ 13.02.2023 ರಂದು ರಾತ್ರಿ 8.50 ಗಂಟೆಗೆ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿನ ಅಮೃತ್ ಮಹಲ್ ಕಾವಲ್ ಬಳಿ ಶ್ರೀ ಚಂದ್ರಪ್ಪರವರು ತಮ್ಮ ಬಾಬ್ತು ಕೆಎ.18 ಇಸಿ.8072 ರ ಹೀರೋ ಹೋಂಡಾ ಬೈಕನ್ನು ಬಗ್ಗವಳ್ಳಿ ಕಡೆಯಿಂದ ಅಜ್ಜಂಪುರಕ್ಕೆ ರಸ್ತೆಯ ಎಡಬದಿಯಲ್ಲಿ ಅಮೃತ್ ಮಹಲ್ ಕಾವಲ್ ಬಳಿ ಚಲಾಯಿಸಿಕೊಂಡು ಹೋಗುತ್ತಿರುವಾಗ ಎದುರುಗಡೆಯಿಂದ ಆರೋಪಿಯಾದ ನೀವು ಕೆಎ.18.ಎಸ್.2205 ರ ಬೈಕನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಶ್ರೀ ಚಂದ್ರಪ್ಪರವರು ಚಾಲನೆ ಮಾಡುತ್ತಿದ್ದ ಕೆಎ.18 ಇಸಿ.8072 ರ ಹೀರೋ ಹೋಂಡಾ ಬೈಕ್‌ಗೆ ಡಿಕ್ಕಿ ಹೊಡೆಸಿ ಅಪಘಾತಪಡಿಸಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ಬೈಕನ್ನು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಶ್ರೀ ಚಂದ್ರಪ್ಪರವರು ಚಾಲನೆ ಮಾಡುತ್ತಿದ್ದ

ಕೆಎ.18 ಇಸಿ.8072 ರ ಹೀರೋ ಹೋಂಡಾ ಬೈಕ್‌ಗೆ ಡಿಕ್ಕಿ ಹೊಡೆಸಿದ ಪರಿಣಾಮ ಶ್ರೀ ಚಂದ್ರಪ್ಪರವರು ಬೈಕ್ ಸಮೇತ ಕೆಳಗೆ ಬಿದ್ದು ತಲೆಗೆ, ಮೂಗಿಗೆ, ಎಡಕೈ ಮತ್ತು ಎಡಕಾಲಿಗೆ ತೀವ್ರಸ್ವರೂಪದ ಗಾಯಗಳಾಗಿ ಚಿಕಿತ್ಸೆ ಫಲಕಾರಿಯಾದೆ ಮೃತಪಟ್ಟಿರುತ್ತಾರೆ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 304(ಎ) ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಕೆಎ.18.ಎಸ್.2205 ರ ಬೈಕನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇಲ್ಲವೆಂದು ತಿಳಿದಿದ್ದರೂ ಸಹ ಚಲಾಯಿಸಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 181 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಕೆಎ.18.ಎಸ್.2205 ರ ಬೈಕಿಗೆ ವಿಮೆ ಪ್ರಮಾಣ ಪತ್ರವನ್ನು ಮಾಡಿಸದೆ ಆರೋಪಿಯಾದ ನೀವು ಚಾಲನೆ ಮಾಡಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 196 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮೇಲ್ಕಂಡ ಬೈಕನ್ನು ಅಪಘಾತ ಮಾಡಿದ ನಂತರ ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೆ ಮತ್ತು ಸ್ಥಳೀಯ ಪೋಲೀಸರಿಗೆ ಯಾವುದೇ ಮಾಹಿತಿಯನ್ನು ತಿಳಿಸದೆ ಸ್ಥಳದಿಂದ ಪರಾರಿಯಾಗಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 187 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರ: 1 ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಉತ್ತರಃ Yes

ಪ್ರಃ 2 ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮಗೆ ಯಾವುದಾದರೂ ಪ್ರತಿರಕ್ಷಣೆ ಇದೆಯೇ ?

ಉತ್ತರಃ Pleaded not guilty and claimed to be tried

(ಈ ಮೇಲ್ಕಂಡ ಅಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ. )

**ದಿನಾಂಕಃ 04.01.2025**

ಸಹಿ/-

**(ರಾಹುಲ್ ಶೆಟ್ಟಿಗಾರ್)**
**ಸಿವಿಲ್ ನ್ಯಾಯಾಧೀಶರು ಮತ್ತು**
**ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ**

**ಆರೋಪಿಯ ಸಹಿಃ**